2774084

ಈ ಪ್ರಶ್ನೆ ಪುಸ್ತಿಕೆಯಲ್ಲಿ ಸಾಮಾನ್ಯ ಕನ್ನಡ (ವಿಷಯ ಸಂಕೇತ : **370**) ಹಾಗೂ ಸಾಮಾನ್ಯ ಇಂಗ್ಲೀಷ್ (ವಿಷಯ ಸಂಕೇತ : **371**) ಎಂಬ ಎರಡು ವಿಷಯದ ಪ್ರಶ್ನೆ ಪತ್ರಿಕೆಗಳಿವೆ. ಅಭ್ಯರ್ಥಿಗಳು ಸಾಮಾನ್ಯ ಕನ್ನಡ ಅಥವಾ ಸಾಮಾನ್ಯ ಇಂಗ್ಲೀಷ್ ಇವುಗಳಲ್ಲಿ ಯಾವುದಾದರೂ ಒಂದನ್ನು ಮಾತ್ರ ಆರಿಸಿ ಮತ್ತು ಉತ್ತರಿಸಬೇಕು. ಅಭ್ಯರ್ಥಿಯು ತಾನು ಆಯ್ಕೆ ಮಾಡಿಕೊಂಡು ಉತ್ತರಿಸುವ ವಿಷಯದ ಮುಂದಿನ ವೃತ್ತವನ್ನು ಸ್ಪಷ್ಟವಾಗಿ ಒ.ಎಂ.ಆರ್. ಉತ್ತರ ಹಾಳೆಯಲ್ಲಿರುವ ನಿಗದಿತ ಸ್ಥಳದಲ್ಲಿ ಎನ್‌ಕೋಡ್ ಮಾಡತಕ್ಕದ್ದು. **ವಿಷಯ ಸಂಕೇತವನ್ನು ಎನ್‌ಕೋಡ್ ಮಾಡದಿದ್ದಲ್ಲಿ *OMR* ಉತ್ತರ ಹಾಳೆಯನ್ನು ತಿರಸ್ಕರಿಸಲಾಗುವುದು.**

**ಈ ಪ್ರಶ್ನೆ ಪುಸ್ತಿಕೆಯನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು**

**2019**

ಪ್ರಶ್ನೆ ಪತ್ರಿಕೆ ಶ್ರೇಣಿ

**D**

# ಪ್ರಶ್ನೆ ಪುಸ್ತಿಕೆ

# ಸಾಮಾನ್ಯ ಕನ್ನಡ (ಪತ್ರಿಕೆ II)

**ಸಮಯ : $1\frac{1}{2}$ ಗಂಟೆಗಳು** | **ವಿಷಯ ಸಂಕೇತ : 370** | **ಗರಿಷ್ಠ ಅಂಕಗಳು : 100**

## ಸೂಚನೆಗಳು

1. ಪರೀಕ್ಷೆ ಪ್ರಾರಂಭವಾದ ಕೂಡಲೇ ನಿಮ್ಮ ಪ್ರಶ್ನೆಪತ್ರಿಕೆಯಲ್ಲಿ ಅಮುದ್ರಿತ ಅಥವಾ ಹರಿದಿರುವ ಅಥವಾ ಬಿಟ್ಟು ಹೋಗಿರುವ ಪುಟಗಳು ಅಥವಾ ಪ್ರಶ್ನೆಗಳು ಇತ್ಯಾದಿಗಳು ಕಂಡುಬಂದಲ್ಲಿ ನಿಮ್ಮ ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಅದೇ ಶ್ರೇಣಿಯ ಪೂರ್ಣ ಪ್ರಶ್ನೆ ಪತ್ರಿಕೆಯೊಂದಿಗೆ ಬದಲಾಯಿಸಿ ಕೊಳ್ಳತಕ್ಕದ್ದು.
2. **ಅಭ್ಯರ್ಥಿಯು ಪ್ರಶ್ನೆ ಪತ್ರಿಕೆಯ ಶ್ರೇಣಿಯು, ತಮ್ಮ ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಅದೇ ಪ್ರಶ್ನೆಪತ್ರಿಕೆಯ ಶ್ರೇಣಿಯಾಗಿರುವುದೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ವ್ಯತ್ಯಾಸಗಳು ಕಂಡುಬಂದಲ್ಲಿ, ಸಂವೀಕ್ಷಕರ ಗಮನಕ್ಕೆ ತರುವುದು ಮತ್ತು ಪ್ರಶ್ನೆಪತ್ರಿಕೆಯ ಶ್ರೇಣಿಯು ತಮಗೆ ಹೊಂದುವ (ಅದೇ) ಪ್ರಶ್ನೆ ಪತ್ರಿಕೆಯಾದ ಮತ್ತು ಒ.ಎಂ.ಆರ್.ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಶ್ರೇಣಿಯ ಪ್ರಶ್ನೆ ಪತ್ರಿಕೆಯನ್ನೇ ಪಡೆಯತಕ್ಕದ್ದು.**
3. ಪಕ್ಕದಲ್ಲಿ ಒದಗಿಸಿರುವ ಪ್ರಶ್ನೆಪತ್ರಿಕೆಯ ಚೌಕದಲ್ಲೇ ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. **ಪ್ರಶ್ನೆ ಪುಸ್ತಿಕೆಯಲ್ಲಿ ಬೇರೆ ಏನನ್ನೂ ಬರೆಯಬಾರದು.**

| ನೋಂದಣಿ ಸಂಖ್ಯೆ | | | | | | |
|---|---|---|---|---|---|---|
| 9 | 2 | 4 | 4 | 3 | 2 | 2 |

4. **ಈ ಪ್ರಶ್ನೆ ಪುಸ್ತಿಕೆ 100 ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.** ಪ್ರತಿಯೊಂದು ಪ್ರಶ್ನೆಯು **4** ಪ್ರತಿಕ್ರಿಯೆಗಳನ್ನು (ಉತ್ತರಗಳನ್ನು) ಒಳಗೊಂಡಿರುತ್ತದೆ. ನೀವು ಉತ್ತರ ಹಾಳೆಯಲ್ಲಿ ಗುರುತು ಮಾಡಬೇಕೆನಿಸುವ ಉತ್ತರವನ್ನು ಆಯ್ಕೆ ಮಾಡಿಕೊಳ್ಳಿ. ಒಂದು ವೇಳೆ ಅಲ್ಲಿ ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿವೆಯೆಂದು ನೀವು ಭಾವಿಸಿದರೆ ನಿಮಗೆ ಅತ್ಯುತ್ತಮವೆನಿಸುವ ಉತ್ತರಕ್ಕೆ ಗುರುತು ಮಾಡಿ. ಏನೇ ಅದರೂ ಪ್ರತಿ ಪ್ರಶ್ನೆಗೆ ನೀವು ಕೇವಲ ಒಂದು ಉತ್ತರವನ್ನು ಮಾತ್ರ ಆಯ್ಕೆ ಮಾಡಬೇಕು.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾಗಿರುವ ಪ್ರತ್ಯೇಕ ಒ.ಎಂ.ಆರ್. ಉತ್ತರ ಹಾಳೆಯ ಮೇಲೆ **ಕೇವಲ ಕಪ್ಪು ಅಥವಾ ನೀಲಿ ಶಾಯಿಯ ಬಾಲ್‌ಪಾಯಿಂಟ್ ಪೆನ್ನಿನಲ್ಲಿ ಮಾತ್ರ ಗುರುತು ಮಾಡಬೇಕು.** ಒ.ಎಂ.ಆರ್. ಉತ್ತರ ಪತ್ರಿಕೆ ಹಾಳೆಯಲ್ಲಿನ ವಿವರವಾದ ಸೂಚನೆಗಳನ್ನು ಗಮನಿಸುವುದು.
6. ಎಲ್ಲಾ ಪ್ರಶ್ನೆಗಳಿಗೆ ಸಮಾನ ಅಂಕಗಳು. **ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿರಿ.** ನೀವು ಗಳಿಸುವ ಒಟ್ಟಾರೆ ಅಂಕಗಳು ನೀವು ಉತ್ತರ ಪತ್ರಿಕೆ ಹಾಳೆಯಲ್ಲಿ ಗುರುತು ಮಾಡುವ ಸರಿಯಾದ ಉತ್ತರಗಳ ಸಂಖ್ಯೆಯನ್ನು ಮಾತ್ರ ಆಧರಿಸಿರುತ್ತದೆ.
7. ಚಿತ್ತು ಕೆಲಸಕ್ಕಾಗಿ ಹಾಳೆಗಳನ್ನು ಪ್ರಶ್ನೆ ಪುಸ್ತಿಕೆಯ ಕೊನೆಯಲ್ಲಿ ಸೇರಿಸಲಾಗಿದೆ. ಪ್ರಶ್ನೆ ಪುಸ್ತಿಕೆಯ ಇನ್ನುಳಿದ ಯಾವ ಭಾಗದಲ್ಲಿಯೂ ನೀವು ಯಾವ ರೀತಿಯ ಗುರುತನ್ನು ಮಾಡತಕ್ಕದ್ದಲ್ಲ.
8. ಪರೀಕ್ಷೆಯ ಮುಕ್ತಾಯವನ್ನು ಸೂಚಿಸುವ ಅಂತಿಮ ಗಂಟೆ ಬಾರಿಸಿದ ತಕ್ಷಣವೇ ಒ.ಎಂ.ಆರ್. ಉತ್ತರ ಪತ್ರಿಕೆ ಹಾಳೆಯಲ್ಲಿ ಇನ್ನಾವುದೇ ಗುರುತು ಮಾಡುವುದನ್ನು ನಿಲ್ಲಿಸಬೇಕು. ಸಂವೀಕ್ಷಕರು ಬಂದು ನಿಮ್ಮಲ್ಲಿರುವ ಒ.ಎಂ.ಆರ್. ಉತ್ತರ ಹಾಳೆಯನ್ನು ತಮ್ಮ ವಶಕ್ಕೆ ಪಡೆದುಕೊಂಡು ಲೆಕ್ಕಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ನಿಮ್ಮ ಆಸನದಲ್ಲಿಯೇ ಕುಳಿತಿರತಕ್ಕದ್ದು.

**ಯಾವುದೇ ರೀತಿಯ ಮೊಬೈಲ್ ಫೋನ್, ಕ್ಯಾಲ್‌ಕ್ಯುಲೇಟರ್ ಮತ್ತು ಇತರೆ ರೀತಿಯ ಎಲೆಕ್ಟ್ರಾನಿಕ್/ಕಮ್ಯೂನಿಕೇಷನ್ ಸಾಧನಗಳು ಇತ್ಯಾದಿಗಳನ್ನು ಪರೀಕ್ಷಾ ಕೇಂದ್ರದ ಆವರಣದೊಳಗೆ ತರುವುದನ್ನು ನಿಷೇಧಿಸಿದೆ.**

***Note :** English version of the instructions is printed on the back cover of this booklet.*

*ಸೂಚನೆ : ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗವನ್ನು ತುಂಬಲು ನಾಲ್ಕು ಉತ್ತರ ನೀಡಿದೆ. ಅವುಗಳಲ್ಲಿ ಸೂಕ್ತವಾದುದನ್ನು ಗುರುತಿಸಿ. (ಪ್ರಶ್ನೆ ಸಂಖ್ಯೆ **1 – 5**)*

ಉದಾಹರಣೆ: ಮೀನ್ ಎಂದರೆ

(1) ಹೊಳೆಯುವ

(2) ಮೀಯು

(3) ಮೇಯು

(4) ಆಕಾಶ

ಇಲ್ಲಿ "ಹೊಳೆಯುವ" ಎಂಬುದು "ಮೀನ್"ನ ಅರ್ಥವನ್ನು ಹೇಳುವ ಪದ ಆದುದರಿಂದ (1) ನ್ನು ಗುರುತಿಸಬೇಕು.

**1.** "ಪದ್ಮ" ಎಂದರೆ

(1) ತಾವರೆ

(2) ಪತ್ರ

(3) ಧೈರ್ಯಶಾಲಿ

(4) ಪಾವನ

**2.** "ಸೊರಗು" ಎಂದರೆ

(1) ಬೆಂಡಾಗು

(2) ತೆಳ್ಳಗಾಗು

(3) ಬಾಗು

(4) ಇಲ್ಲವಾಗು

**3.** "ತೃಷೆ" ಎಂದರೆ

(1) ನೆನೆ

(2) ಹಸಿವು

(3) ತೊಂದರೆ

(4) ಬಾಯಾರಿಕೆ

**4.** "ಕಸವರ" ಎಂದರೆ

(1) ಶುಚಿಯಾದ

(2) ಒಳ್ಳೆಯ

(3) ಬೆಲೆಬಾಳುವ

(4) ಬಂಗಾರ

**5.** "ಕಲಹ" ಎಂದರೆ

(1) ಕಲಕು

(2) ಗೊಂದಲ

(3) ಜಗಳ

(4) ಕಾಲವಾಗು

***ಸೂಚನೆ :*** *ಕೆಳಗೆ ಕೊಟ್ಟಿರುವ ನಾಲ್ಕು ಪದಗಳಲ್ಲಿ ಸಮಾನವಾದ ಅಂಶವಿರುವ ಮೂರು ಪದಗಳಿವೆ. ಭಿನ್ನವಾಗಿ ಉಳಿದಿರುವ ಪದವನ್ನು ಗುರುತಿಸಿ. (ಪ್ರಶ್ನೆ ಸಂಖ್ಯೆ **6 – 11**)*

ಉದಾಹರಣೆ :

(1) ಚುನಾವಣೆ

(2) ಆಸ್ಪತ್ರೆ

(3) ಮುಖ್ಯಮಂತ್ರಿ

(4) ಭಾಷಣ

ಇವುಗಳಲ್ಲಿ (1), (3), (4) ರಾಜಕೀಯಕ್ಕೆ ಸಂಬಂಧಿಸಿದ ಪದಗಳು ಭಿನ್ನರೂಪ (2) ಆಸ್ಪತ್ರೆ ಆದ್ದರಿಂದ (2) ನ್ನು ಗುರುತಿಸಬೇಕು.

**6.** (1) ಇಳೆ

(2) ಧರೆ

(3) ವಸುಂಧರೆ

(4) ಸುಖದೊರೆ

**7.** (1) ವದನ

(2) ಮುಖ

(3) ಮಖ

(4) ಆನನ

**8.** (1) ಮರ

(2) ವೃಕ್ಷ

(3) ತರು

(4) ಬಳ್ಳಿ

**9.** (1) ಉದಕ

(2) ಜಳಕ

(3) ಅಭ್ಯಂಜನ

(4) ಸ್ನಾನ

**10.** (1) ಇಮ್ಮಡಿ

(2) ದಮ್ಮಡಿ

(3) ಮುಮ್ಮಡಿ

(4) ನಾಲ್ಮಡಿ

**11.** (1) ಹುಲಿ

(2) ದ್ವೀಪಿ

(3) ಪುಂಡರೀಕ

(4) ಸಿಂಹ

*ಸೂಚನೆ : ಕೆಳಗೆ ಕೊಟ್ಟಿರುವ ನಾಲ್ಕು ಪದಗಳಲ್ಲಿ ಒಂದು ಮಾತ್ರ ಅಚ್ಚ ಕನ್ನಡ ಪದ. ಉಳಿದ ಮೂರು ಅನ್ಯ ಭಾಷಾ ಪದಗಳು ಕನ್ನಡ ಪದವನ್ನು ಗುರ್ತಿಸಿ. (ಪ್ರಶ್ನೆ ಸಂಖ್ಯೆ **12 – 15**)*

ಉದಾಹರಣೆ :

(1) ಮೂಡಣ

(2) ಪೋಲೀಸ್

(3) ಖಾನಾವಳಿ

(4) ಸಾಬೂನು

ಇಲ್ಲಿ 'ಮೂಡಣ' ಎಂಬುದು ಅಚ್ಚ ಕನ್ನಡ ಪದ, ಅದುದರಿಂದ (1) ನ್ನು ಗುರ್ತಿಸಬೇಕು.

**12.** (1) ಜಮೀನು

(2) ಗುಲಾಮ

(3) ತಂಬಾಕು

(4) ನೆರೆಹೊರೆ

**13.** (1) ಕಾಗದ

(2) ಮೈದಾನ

(3) ಮೂರಾಬಟ್ಟೆ

(4) ಮೊಸರು

**14.** (1) ಸೂರ್ಯ

(2) ಇನ

(3) ಮಾರ್ತಾಂಡ

(4) ನೇಸರು

**15.** (1) ದೇವಸ್ಥಾನ

(2) ದೇವಾಲಯ

(3) ಗುಡಿ

(4) ಮಂದಿರ

*ಸೂಚನೆ : ಈ ಕೆಳಗೆ ಕೆಲವು ಕನ್ನಡದ ನುಡಿಗಟ್ಟುಗಳನ್ನು ಅವುಗಳ ಮುಂದೆ ನಾಲ್ಕು ಪರ್ಯಾಯ ರೂಪಗಳನ್ನು ನೀಡಿದೆ. ನುಡಿಗಟ್ಟಿನ ಅರ್ಥವನ್ನು ವಿವರಿಸುವ ರೂಪವನ್ನು ಆಯ್ಕೆಮಾಡಿ ಗುರುತಿಸಿ. (ಪ್ರಶ್ನೆ ಸಂಖ್ಯೆ **16 – 19**)*

ಉದಾಹರಣೆ : 'ಕರತಲಾಮಲಕ'

(1) ಕೈಚಳಕ ತೋರು

(2) ಚೆನ್ನಾಗಿ ತಿಳಿದುಕೊಂಡದ್ದು

(3) ಕೈಯಿಂದ ಮುಖದ ತನಕ

(4) ಗೊತ್ತು ಎಂಬ ಅಹಂಕಾರ

ಇಲ್ಲಿ 'ಚೆನ್ನಾಗಿ ತಿಳಿದುಕೊಂಡದ್ದು' ಸರಿಯಾದ ಅರ್ಥ, ಅದ್ದರಿಂದ (2) ನ್ನು ಗುರ್ತಿಸಬೇಕು.

16. ಚಾಪೆಕೆಳಗೆ ತೂರು

(1) ಬುದ್ಧಿವಂತಿಕೆ ತೋರು
(2) ರಂಗೋಲಿ ಕೆಳಗೆನುಗ್ಗು
(3) ಚತುರತೆ
(4) ಚಮತ್ಕಾರತೆ

17. ಎಳೆನಿಂಬೆಕಾಯಿ

(1) ಮಿಡಿನಿಂಬೆಕಾಯಿ
(2) ಹುಳಿನಿಂಬೆಕಾಯಿ
(3) ಅನುಭವಿ
(4) ಅನನುಭವಿ

18. ಉಗುರುಕಡಿ

(1) ಉಗುರುತಿನ್ನು
(2) ಚಿಂತೆನೀಡು
(3) ಚಿಂತಿಸದವ
(4) ಚಿಂತಾಕ್ರಾಂತನಾಗು

19. ಕೈಕಚ್ಚು

(1) ಕೈಕಚ್ಚಿಕೊಂಡ
(2) ನಷ್ಟವಾಗು
(3) ಫೇಲಾಗು
(4) ಲಾಭವಾಗುವುದು

***ಸೂಚನೆ :*** *ಕೆಳಗೆ ಕೊಟ್ಟಿರುವ ಪದಗಳಿಗೆ (ಪ್ರಶ್ನೆ ಸಂಖ್ಯೆ **20 - 25**) ವಿರುದ್ಧಾರ್ಥಕ ಪದಗಳನ್ನು ಗುರ್ತಿಸಿ.*

ಉದಾಹರಣೆ : ಅಂತರ್ವಾಣಿ

(1) ಹೊರವಾಣಿ
(2) ದುರ್ವಾಣಿ
(3) ಬಹಿರ್ವಾಣಿ
(4) ಒಳಗಿನವಾಣಿ

ಇಲ್ಲಿ (3) ಬಹಿರ್ವಾಣಿ ಸರಿಯಾದ ಉತ್ತರ ಆದ್ದರಿಂದ (3) ನ್ನು ಗುರುತಿಸಿ.

20. ಸೊರಗು

(1) ಮರಗು
(2) ಸೊಕ್ಕು
(3) ಬಿಕ್ಕು
(4) ಕೊರಗು

21. ಅರಳು

(1) ಹೊರಳು
(2) ತಿರುಳು
(3) ಮುದುಡು
(4) ಕದಡು